## ನನ್ನ ಓದು

ಉತ್ತರ ಕರ್ನಾಟಕದ ಕಲಾವಿದರು, ಕಲಾಸಾಹಿತ್ಯದ ಬಗೆಗಿನ ಈ ಲೇಖಕರ ಅಗಾಧವಾದ ಕಾಳಜಿ, ಆಪ್ತತೆ ಇವರ ಬರವಣಿಗೆಯ ಶೈಲಿ, ಸತ್ವ ಹಾಗೂ ವಿವರಣೆಗಳಲ್ಲಿ ಎದ್ದು ಕಾಣುತ್ತದೆ. ಇದು ಕನ್ನಡಕ್ಕೆ ನಿರ್ದಿಷ್ಟವಾದ ಒಂದು ಕಲಾಸಾಹಿತ್ಯಕ ಬೆಳವಣಿಗೆ. ಎಲ್ಲೆಡೆ ನೆಲೆಸಿರುವ ಕೇರಳದ ಕಲಾವಿದರದ್ದೇ 'ಲೋಕಮೇವ' ಕಲಾ ಪ್ರದರ್ಶನವಾಗಿರಬಹುದು ಅಥವಾ ಕೊಚ್ಚಿಯಲ್ಲಿ 2012ರಿಂದ ಎರಡು ವರ್ಷಕ್ಕೊಮ್ಮೆ ನಡೆಯುತ್ತಿರುವ 'ಕೊಚ್ಚಿ ಬಿನಾಲೆ' ರೀತಿಯ ಪ್ರದರ್ಶನಗಳಲ್ಲಿ ಈ ತೆರನಾದ ತನ್ನತನದ ಪ್ರತಿಪಾದನೆ ಆಗುತ್ತಿರುವುದು ತಪ್ಪೇನಲ್ಲ. ಒಂದೊಮ್ಮೆ, ಮೈಸೂರು ಅರಮನೆಯ ಅಧಿಪತ್ಯದಲ್ಲಿ ಆ ಪ್ರಾಂತ್ಯದ ಕಲಾವಿದರೇ ಹೆಚ್ಚು ಬರವಣಿಗೆಗೊಳಗಾಗುತ್ತಿದ್ದರು. ಈಗ ಅದನ್ನು ಡಿ–ಕನ್‌ಸ್ಟ್ರಕ್ಟ್ ಅಥವಾ ನಿರ್ವಚನ ಮಾಡುವ ಈ ಪ್ರಯತ್ನ ಶ್ಲಾಘನೀಯವೂ ಹೌದು. ಒಂದರ್ಥದಲ್ಲಿ ಬೆಂಗಳೂರು ಕೇಂದ್ರಿತ ಬರವಣಿಗೆಯಿಂದ ಹೊರನಿಂತು ನೋಡುವ ಸಬಾಲ್ಟರ್ನ್ ಯತ್ನವಿದು.

***

ಶಿವಾನಂದ ಬಂಟನೂರರು ಈ ಪುಸ್ತಕದಲ್ಲಿ ಬಹುವಾಗಿ ಹಿಂದಿನ, ಹಂಚಿಹೋದ ಬರವಣಿಗೆಗಳ ಪರಿಚಯಕ್ಕೆ ಯತ್ನಿಸಿರುವುದು ಸ್ಪಷ್ಟವಾದರೂ, ಆ ಪರಿಚಯದ 'ವಿನ್ಯಾಸ ಕ್ರಮ'ವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಇದು ಕನ್ನಡದ ಆಧುನಿಕ ಹಾಗೂ ಸಮಕಾಲೀನ ಕಲಾ ಕಾಲಘಟ್ಟದ ಪರಿಚಯ. ಈ ಪರಿಚಯದಲ್ಲಿ ಕಲೆಯ ಕುರಿತಾದ ಕನ್ನಡ ಅಭಿವ್ಯಕ್ತಿಯ ಭಾಷಾ ಸಂಪತ್ತಿನ ಬೆಳವಣಿಗೆಗೆ ಹೆಚ್ಚು ಗಮನ ಹರಿಸಬಹುದಾಗಿತ್ತು. ಇಲ್ಲಿನ ಕಲೆಯ ಕುರಿತು ಇಂಗ್ಲಿಷ್ ಬರವಣಿಗೆಗಳ ಅನುಪಸ್ಥಿತಿಯೂ ಸಹ ಅಷ್ಟೇ ಎದ್ದು ಕಾಣುವಂತಿದೆ. ಇದಕ್ಕೊಂದು ಗುರುತರವಾದ ಉದಾಹರಣೆ ಎಂದರೆ ಮಾರ್ಥಾ ಯಾಕಿಮೊವಿಜ್ (ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿನ ಕಲಾ ಕಾಲಂಗಳನ್ನು ಬರೆಯುತ್ತಿದ್ದರು) ಮತ್ತು ಸುರೇಶ್ ಜಯರಾಮ್. ಮಾರ್ಥಾ ಮೂರ್ನಾಲ್ಕು ದಶಕಗಳಿಂದ ಇಲ್ಲಿನ ಕಲಾವಿದರ ಬಗ್ಗೆ ಬರೆದದ್ದೇ ಅಲ್ಲದೆ, ಅವರ ಬರವಣಿಗೆಯಿಂದಲೇ ಕರ್ನಾಟಕದ ಅನೇಕ ಕಲಾವಿದರು ದೇಶಾದ್ಯಂತ ಪರಿಚಿತರೂ, ಜನಪ್ರಿಯರೂ, ಸ್ಥಾಪಿತರೂ ಆದದ್ದಿದೆ. ಅವರ ಕೊಡುಗೆಯನ್ನು ಗುರ್ತಿಸಿ ಸ್ವತಃ 'ಕರ್ನಾಟಕ ಲಲಿತಕಲಾ ಅಕಾಡೆಮಿ' ಅವರ ಕುರಿತ ಮೊನೋಗ್ರಾಫ್ ಅನ್ನು ಪ್ರಕಟಿಸಿದೆ.

ಶಿವಾನಂದರು ಮುಖ್ಯ ಪ್ರಶ್ನೆಯೊಂದಕ್ಕೆ ನೇರವಾಗಿ ಮುಖಾಮುಖಿಯಾಗದ ಪ್ರಸಂಗವೊಂದಿದೆ. ಇಲ್ಲಿನವರಿಗೆ ಹೊರಗೆ ನೆಲೆಸಿದವರ ಬಗ್ಗೆ ಇರುವ ಆಸಕ್ತಿ, ಹೊರಗಿನ ಕಲಾವಿದರುಗಳು ಇಲ್ಲಿ ನೆಲೆನಿಂತು ಕೊಡಮಾಡಿದ ವಿನಿಮಯಗಳ ಕುರಿತ ಗಮನ ಹೆಚ್ಚು ತೀಕ್ಷ್ಣವಾಗಬಹುದಿತ್ತು. ಈ ಪುಸ್ತಕವು ಮುಖ್ಯವಾಗಿ ಕರ್ನಾಟಕದ ಆಧುನಿಕ ಕಲೆಯ ಕುರಿತಾದ ಅತ್ಯುತ್ತಮ ಪುಸ್ತಕವಾಗುವತ್ತಲೇ ಗಮನವಿರಿಸಿದ್ದರೂ ಸಹ, 'ಸಮಕಾಲೀನ ಕನ್ನಡ ದೃಶ್ಯಕಲಾ ಸಾಹಿತ್ಯ' ಎಂಬ ಶೀರ್ಷಿಕೆಗೆ ಒತ್ತು ನೀಡಿರುವುದರ ಹಿಂದಿನ ಶೈಕ್ಷಣಿಕ ಒತ್ತಡ ಗಮನಿಸುವಂತಹದ್ದೇ. ಇದು ಈ ಪುಸ್ತಕದ ಸಮಸ್ಯೆ ಆಗಿರದೆ, ಆಧುನಿಕದಿಂದ ಸಮಕಾಲೀನಕ್ಕೆ ಕನ್ನಡ–ಕರ್ನಾಟಕದ ಕಲೆ ರೂಪಾಂತರ ಹೊಂದುವ ಕ್ರಿಯೆಯಲ್ಲಿ ದೃಶ್ಯವು ಪದ–ದೃಶ್ಯ ಆಗಿಬಿಟ್ಟಿರುವುದು ಸ್ಪಷ್ಟ. ಶಾಬ್ದಿಕ (ವಿಡಿಯೋ ಕಲೆ) ಹಾಗೂ ಲಿಖಿತ ಅಕ್ಷರಗಳು (ತತ್ವಾಧಾರಿತ ಕಲೆ) ಸಮಕಾಲೀನ ಕಲೆಯ ಭಾಗವಾಗಿ, ವಿಮರ್ಶೆಯ ಸ್ಥಾನವನ್ನು ಕ್ಯುರೇಷನ್ ಸಂಪ್ರದಾಯವು ಆವರಿಸಿಕೊಂಡ ಕಥನ ಈಗಾಗಲೇ ಹಲವು ದಶಕಗಳಷ್ಟು ಹಳತಾದಾದ್ದು. ಅಂದರೆ ದೃಶ್ಯ ಎಂಬುದು ಗೋಚರ, ಶಾರೀರ, ಶರೀರ, ಶಾಬ್ದಿಕಗಳ ಸಮ್ಮಿಶ್ರಣವಾಗಿ ಕರ್ನಾಟಕದಲ್ಲಿ ಸಮಕಾಲೀನ ಕಲೆಯಾಗಿದೆ. ಎಂ.ಎಸ್. ಮೂರ್ತಿಯವರ ದೃಶ್ಯ ಪುಸ್ತಕವನ್ನು ಪುಸ್ತಕವನ್ನಾಗಿ ಸ್ವೀಕರಿಸಿದ ಈ ಪುಸ್ತಕದಲ್ಲಿ, ಅದೇ ವಿಸ್ತರಣದಲ್ಲಿ ದೃಶ್ಯ–ಶಬ್ದ–ಬರವಣಿಗೆಯನ್ನೂ ಒಳಗೊಳ್ಳುವ ಕಲಾಕೃತಿಗಳನ್ನೂ ಹೇಗೆ ವಿಮರ್ಶಾ ಪಠ್ಯಗಳನ್ನಾಗಿ ಸ್ವೀಕರಿಸಬಹುದು ಅಥವಾ ಸ್ವೀಕರಿಸಬಾರದು ಎಂಬುದರ ಕುರಿತು ಹೆಚ್ಚು ಬೆಳಕು ಚೆಲ್ಲಿದ್ದರೆ, ಈ ಕೃತಿಯ ಘನತೆ, ಈ ಹೊತ್ತಿಗೆ, ಇನ್ನೂ ಹೆಚ್ಚಾಗುತ್ತಿತ್ತು. ಮುನ್ನುಡಿಯಲ್ಲಿ ಸುಬ್ರಹ್ಮಣ್ಯಂ ಅವರು ಇದನ್ನು ತಮ್ಮದೇ ಶೈಲಿಯಲ್ಲಿ ಬೊಟ್ಟು ಮಾಡಿ ತೋರಿಸಿದ್ದಾರೆ ಕೂಡ.

ಸಿಚುಯೇಶನಲಿಸ್ಟ್, ಇಂಪ್ರುವೈಸೇಷನ್, ಕಾನ್ಸೆಪ್ಟ್ ಕಲೆ, ಕ್ಯುರೇಷನ್ ಪಠ್ಯಗಳನ್ನು ಈ ಪುಸ್ತಕದ ಮುಂದಿನ